# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-01

Cw-01

ಸಾಕ್ಷಿದಾರರ ಹೆಸರುಃ ಶ್ರೀ ಗುಡ್ಡಪ್ಪ ಓಲೇಕಾರ

ತಂದೆಃಗಂಡನ ಹೆಸರುಃ ಶ್ರೀ ಹೊನ್ನಪ್ಪ

ವಯಸ್ಸುಃ 38 ವರ್ಷ

ಉದ್ಯೋಗಃ ಕೂಲಿ

ವಾಸ ಸ್ಥಳಃ ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು

**ದಿನಾಂಕ:03.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಆರೋಪಿತರು ನನಗೆ ಗೊತ್ತು. ಆರೋಪಿತರು ನಮ್ಮೂರಿನವರಾಗಿದ್ದು, ಅವರು ನನಗೆ ಪರಿಚಯ ಇರುತ್ತಾರೆ. ನಾನು ವಾಲ್ಮೀಕಿ ಜಾತಿಗೆ ಸೇರಿರುತ್ತೇನೆ. ಆರೋಪಿತರು ಹಿಂದೂ ಲಿಂಗವಂತ ಜಾತಿಗೆ ಸೇರಿರುತ್ತಾರೆ.

2. ಈಗ್ಗೆ 6-7 ತಿಂಗಳ ಹಿಂದೆ ಬೆಳಿಗ್ಗೆ 10.30 ರಿಂದ 11.00 ಗಂಟೆ ಸಮಯದಲ್ಲಿ ಗ್ರಾಮ ಪಂಚಾಯತಿಯ ಅಧಿಕಾರಿಗಳು, ಪಿಡಿಒ, ಗುತ್ತಿಗೆದಾರರು ಮತ್ತು ಇತರರು ನಮ್ಮೂರಿನ ಗ್ರಾಮ ಪಂಚಾಯತಿ ಹೊಸ ಕಟ್ಟಡ ಕಟ್ಟಲು ಲೈನ್ ಔಟ್ ಮಾಡಲು ಬಂದಿದ್ದರು. ನಾನು, ಗೋವಿಂದಪ್ಪ ಮತ್ತು ಚಂದ್ರಪ್ಪ ಸೇರಿಕೊಂಡು ಗ್ರಾಮ ಪಂಚಾಯತಿಯ ಅಧಿಕಾರಿಗಳು ಲೈನ್ ಔಟ್ ಮಾಡುವ ಕೆಲಸಕ್ಕೆ ಸಹಾಯಮಾಡಲು ಹೋಗಿದ್ದೆವು. ನಾವು ಸದರಿ ಲೈನ್ ಔಟ್ ಕೆಲಸವನ್ನು ಮಧ್ಯಾಹ್ನ 1.00 ಗಂಟೆಗೆ ಮುಗಿಸಿದೆವು.

3. ನಾನು, ಗೋವಿಂದಪ್ಪ ಮತ್ತು ಚಂದ್ರಪ್ಪ ಸೇರಿಕೊಂಡು ಪಂಚಾಯತಿ ಹತ್ತಿರ ಇದ್ದಂತಹ ಒಂದು ಕಟ್ಟೆಯ ಮೇಲೆ ಕುಳಿತುಕೊಂಡಿದ್ದೆವು. ಆಗ ಸಮಯ ಮಧ್ಯಾಹ್ನ 2.00

ಗಂಟೆಯಾಗಿತ್ತು. ಆಗ ಏಕಾಏಕಿ ಎಲ್ಲಾ 6 ಜನ ಆರೋಪಿತರು ನಾವು ಕುಳಿತಿದ್ದ ಕಟ್ಟೆ ಹತ್ತಿರ ಬಂದು ಏ ತಳವಾರ ಮಿಂಡ್ರಿ ಮಕ್ಕಳಾ, ಏ ವಾಲ್ಮೀಕಿ ಸೂಳೇ ಮಕ್ಕಳಾ, ಇರೋದೆ 20-30 ಮನೆಗಳು ಇರುತ್ತವೆ, ಅದರಲ್ಲಿ ಬಂದು ಎಷ್ಟು ಧಿಮಾಕು ಮಾಡುತ್ತೀರಾ ಅಂತಾ ಬೈಯುತ್ತಾ ನನಗೂ, ಗೋವಿಂದಪ್ಪ ಮತ್ತು ಚಂದ್ರಪ್ಪನಿಗೆ ಕೈಗಳಿಂದ ಮೈ ಕೈ ಗೆ ಹೊಡಿ-ಬಡಿ ಮಾಡಿದರು. ಆರೋಪಿಗಳು ನಮ್ಮನ್ನು ಕುರಿತು ಆಸ್ತಿ ನಿಮ್ಮದೋ ಅಥವಾ ನಿಮ್ಮಪ್ಪಂದೋ ಎಂದು ಬೈದಾಡಿದರು. ಆಗ ನಾವು ಆರೋಪಿತರಿಗೆ ಆಸ್ತಿಯು ರಾಜ್ಯಪಾಲರ ಹೆಸರಿನಲ್ಲಿದ್ದು, ನಾವು ಕೇವಲ ಕೂಲಿ ಕೆಲಸ ಮಾಡಲು ಬಂದಿದ್ದೇವೆಂದು ಹೇಳಿದೆವು. ಆದರೆ ಆರೋಪಿತರು ನಮ್ಮನ್ನು ಕುರಿತು ನೀವು ಇನ್ನೊಮ್ಮೆ ಬಂದರೆ ನಿಮ್ಮ ಜೀವ ತೆಗೆಯುತ್ತೇವೆಂದು ಜೀವ ಬೆದರಿಕೆ ಹಾಕಿದರು.

4. ಆರೋಪಿಗಳು ನಮಗೆ ಕೈಗಳಿಂದ ಹೊಡಿ-ಬಡಿ ಮಾಡಿದ್ದರಿಂದ ನನಗೆ ಬೆನ್ನಿಗೆ, ಪಕ್ಕೆಗೆ ಮತ್ತು ಹೊಟ್ಟೆಗೆ ಪೆಟ್ಟಾಗಿದ್ದು, ನಾನು ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಒಂದು ದಿನ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನ್ನ ಜೊತೆ ಚಾಸಾ-4 ಮತ್ತು 5 ರವರೂ ಸಹ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಾನು ಚಿಕಿತ್ಸೆ ಪಡೆದುಕೊಂಡ ಬಳಿಕ ರಾಣೇಬೆನ್ನೂರು ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ದಾಖಲುಮಾಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನೋಡುತ್ತಿದ್ದು, ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

5. ದೂರು ಕೊಟ್ಟ ಬಳಿಕ ಪೊಲೀಸರು ಮರುದಿನ ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಜಾಗದಲ್ಲಿ ಶಿವಪ್ಪ ಮತ್ತು ಚಂದ್ರಪ್ಪ ಇವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಪೋಟೋ ತೆಗೆದುಕೊಂಡು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಎಂದು, ನನ್ನ ಸಹಿಯನ್ನು

ನಿಪಿ–3(ಎ) ಎಂದು ಗುರುತಿಸಲಾಯಿತು. ಪೊಲೀಸರು ತೆಗೆದ 06 ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ–4 ರಿಂದ 9 ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ 2 ಮತ್ತು 4 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ 1, 3, 5 ಮತ್ತು 6 ನೇ ಆರೋಪಿಗಳು ಗೈರು ಹಾಜರಾಗಿದ್ದು, ಮಾನ್ಯ ವಕೀಲರು ಹಾಜರಿದ್ದು, ಸಾಕ್ಷಿಯು ಸದರಿ ಆರೋಪಿತರನ್ನು ನೋಡಿ ಗುರುತು ಹಚ್ಚುವ ಬಗ್ಗೆ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿಯನ್ನು ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ನ್ಯಾಯದಾನ ಹಿತದೃಷ್ಠಿಯಿಂದ ಮಾನ್ಯಮಾಡಲಾಗಿದೆ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ**

6. ಪೊಲೀಸರು ಬರೆದುಕೊಂಡಿರುವ ದಾಖಲಾತಿಗಳಲ್ಲಿ ಏನು ಇದೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಪಂಚನಾಮೆಗೆ ಬಂದಿದ್ದಾಗ ನನಗೆ ನೋಟೀಸು ಕೊಟ್ಟು ಕರೆಸಿಲ್ಲ. ಆದರೆ ಪೋನ್ ಮಾಡಿ ಹೇಳಿದಾಗ ನಾನು ಸ್ಥಳ ಪಂಚನಾಮೆ ಮಾಡುವ ಜಾಗಕ್ಕೆ ಹೋಗಿ ಜಾಗ ತೋರಿಸಿರುತ್ತೇನೆ. ಪೊಲೀಸರು ಪೋನ್ ಮಾಡಿದಾಗ ಎಷ್ಟು ಗಂಟೆಯಾಗಿತ್ತು ಎಂದು ನನಗೆ ಈಗ ನೆನಪಿಲ್ಲ. ಪೊಲೀಸರು ನನಗೆ ಪೋನ್ ಮಾಡಿದಾಗ ನಾನು ಮನೆಯಲ್ಲಿದ್ದೆನು.

7. ಪಿಡಿಒ ಮತ್ತು ಗುತ್ತಿಗೆದಾರರು ಸೇರಿಕೊಂಡು ನನ್ನನ್ನು ಘಟನಾ ಸ್ಥಳಕ್ಕೆ ಕರೆದಿದ್ದರು. ಆರೋಪಿಗಳು ನನಗೆ ಹಲ್ಲೆ ಮಾಡಿದ್ದರಿಂದ ನನ್ನ ಬೆನ್ನಿಗೆ, ಪಕ್ಕೆಗೆ ಮತ್ತು ಹೊಟ್ಟೆಗೆ ಪೆಟ್ಟಾಗಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳು ನನಗೆ ಮತ್ತು ಚಾಸಾ–4 ಮತ್ತು 5 ರವರಿಗೂ ಸಹ ಕೈಗಳಿಂದ ಹಲ್ಲೆ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಒಂದು ದಿನ ದಾಖಲಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

8. ಸ್ಥಳ ಪಂಚನಾಮೆಯನ್ನು ಯಾವ ಪೊಲೀಸರು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಸ್ಥಳ ಪಂಚನಾಮೆಗೆ ನನ್ನ ಜೊತೆ ಶಿವಪ್ಪ ಮತ್ತು ಚಂದ್ರಪ್ಪ ಸಹಿ ಮಾಡಿರುತ್ತಾರೆ. ಸ್ಥಳ ಪಂಚನಾಮೆಗೆ ನನ್ನ ಜೊತೆ ಶಿವಪ್ಪ ಮತ್ತು ಚಂದ್ರಪ್ಪ ಸಹಿ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಪೋಟೋಗಳನ್ನು ಸ್ಥಳ ಪಂಚನಾಮೆ ಮಾಡುವಾಗ ಮೊಬೈಲ್ ನ್ನು ಉಪಯೋಗಿಸಿ ತೆಗೆದಿರುತ್ತಾರೆ. ಪೊಲೀಸರು ಸ್ಥಳ ಪಂಚನಾಮೆಯನ್ನು ಎಷ್ಟು ಸಮಯದಿಂದ ಎಷ್ಟು ಸಮಯದ ತನಕ ಮಾಡಿದರು ಎಂದು ನನಗೆ ಈಗ ನೆನಪಿಲ್ಲ.

9. ಈಗ ನನಗೆ ನಿಪಿ-3 ರ ಸ್ಥಳ ಪಂಚನಾಮೆಯನ್ನು ತೋರಿಸುತ್ತಿದ್ದು, ಅದರ 4 ನೇ ಪುಟದಲ್ಲಿ ದಿನಾಂಕವನ್ನು 02.06.2025 ರಂದು ಮಧ್ಯಾಹ್ನ 3.15 ರಿಂದ ಸಂಜೆ 4.15 ರತನಕ ಬರೆಯಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ನಿಜ. ಪೊಲೀಸರು ಸ್ಥಳ ಪಂಚನಾಮೆಯಲ್ಲಿ ಪೋಟೋಗಳನ್ನು ತೆಗೆಯಲು ಉಪಯೋಗಿಸಿದ ಮೊಬೈಲ್ ಯಾರಿಗೆ ಸೇರಿದ್ದು ಎಂದು ನನಗೆ ಈಗ ಹೇಳಲಾಗುವುದಿಲ್ಲ.

10. ದಿನಾಂಕಃ20.06.2025 ರಂದು ನಾನು, ಗೋವಿಂದಪ್ಪ ಮತ್ತು ಚಂದ್ರಪ್ಪ ಸೇರಿಕೊಂಡು ಆರೋಪಿತರಿಗೆ ಹಲ್ಲೆ ಮಾಡಿದ್ದರಿಂದ ಅವರು ನಮ್ಮ ಮೇಲೆ ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ Cr.No.172/25 ರಡಿಯಲ್ಲಿ ದೂರು ದಾಖಲುಮಾಡಿರುತ್ತಾರೆಂದರೆ ಅದು ನನಗೆ ಗೊತ್ತಿಲ್ಲ. Cr.No.172/25 ರ ಪ್ರಕರಣದಲ್ಲಿ ಆರೋಪಿಗಳಾದ ಶಿವಪ್ಪ ಗುಡ್ಡಪ್ಪ ಡೊಳ್ಳೇರ, ನಿಂಗಪ್ಪ ಹೊನಕೇರಪ್ಪ ಪೂಜಾರ, ಹನುಮಪ್ಪ ಪೂಜಾರ, ಗುಡ್ಡಪ್ಪ, ಚಂದ್ರಪ್ಪ ಮತ್ತು ಗೋವಿಂದಪ್ಪ ಇವರು ನಮ್ಮೂರಿನವರು. ನಾವೆಲ್ಲರೂ ಆರೋಪಿಗಳ ಮೇಲೆ ಹಲ್ಲೆ ಮಾಡಿದ್ದರಿಂದ ಅವರು ನಮ್ಮ ವಿರುದ್ಧ ದೂರು ದಾಖಲುಮಾಡಿರುತ್ತಾರೆ ಎಂದರೆ ಸರಿಯಲ್ಲ.

11. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರು ನೀಡಲು ಪೊಲೀಸ್ ಠಾಣೆಗೆ ನಾನು, ಗೋವಿಂದಪ್ಪ ಮತ್ತು ಚಂದ್ರಪ್ಪ ಹೋಗಿದ್ದೆವು. ಆಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಈಗ

ನೆನಪಿಲ್ಲ. ಪಂಚಾಯತಿ ಆಸ್ತಿಯ ಮೇಲೆ ರಾಣೇಬೆನ್ನೂರು ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ದಾಖಲಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯತಿಯ ಪಿಡಿಒ ರವರು ಸಹ ಸದರಿ ಸಿವಿಲ್ ದಾವೆಯಲ್ಲಿ ಪಕ್ಷಗಾರರಾಗಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯತಿಯ ಆಸ್ತಿ ಯಾವ ಸರ್ವೇ ನಂಬರ್ ನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯತಿ ಆಸ್ತಿ ಮೂರು ಗುಂಟೆ ಇರುತ್ತದೆ. ಸದರಿ ದಾಖಲಾತಿಯನ್ನು ನಾನು ನೋಡಿರುತ್ತೇನೆ. ಗ್ರಾಮ ಪಂಚಾಯತಿ ಆಸ್ತಿಯ ದಕ್ಷಿಣಕ್ಕೆ ಫಕ್ಕೀರಪ್ಪ ಸುರಣಗಿ ರವರ ಜಾಗ ಇರುತ್ತದೆ, ಪಶ್ಚಿಮಕ್ಕೂ ಸಹ ಫಕ್ಕೀರಪ್ಪ ಸುರಣಗಿ ರವರ ಜಾಗ ಇರುತ್ತದೆ, ಪೂರ್ವಕ್ಕೆ ಕಮ್ಮಾರವರ ಆಸ್ತಿ ಇರುತ್ತದೆ. ಉತ್ತರಕ್ಕೆ ದಾರಿ ಇರುತ್ತದೆ.

12. ಸದರಿ ಮೇಲೆ ಹೇಳಿದ ಚಕ್ಕುಬಂಧಿಯೊಳಗೆ ಪೊಲೀಸರು ಪಂಚನಾಮೆ ಮಾಡಿರುತ್ತಾರೆ. ಪೊಲೀಸರು ಸದರಿ ಜಾಗದಲ್ಲಿ ಪಂಚನಾಮೆ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು, ಚಾಸಾ−4 ಮತ್ತು 5 ರವರು ಗ್ರಾಮ ಪಂಚಾಯತಿ ಕೆಲಸವನ್ನು ಮಧ್ಯಾಹ್ನ 1.00 ಗಂಟೆಯ ಒಳಗೆ ಮಾಡಿ ಮುಗಿಸಿರುತ್ತೇವೆಂದು ನನ್ನ ದೂರಿನಲ್ಲಿ ಹೇಳಿ ಬರೆಸಿರುತ್ತೇನೆ. ಜಾಗ ಅಳತೆ ಮಾಡುವಾಗ ಲೈನ್ ಔಟ್ ಹಾಕಿದಾಗ ಒಂದು ಗೆರೆಯನ್ನು ಹಾಕುತ್ತಾರೆ ಎಂದರೆ ನಿಜ.

13. ಸರ್ಕಾರಿ ಜಾಗದ ಹದ್ದುಬಸ್ತಿಗೆ ಒಂದೊಂದು ಧ್ವಜ ಕೂರಿಸಿರುತ್ತಾರೆ ಎಂದರೆ ಸರಿಯಲ್ಲ. ಜಾಗದ 4 ಮೂಲೆಗಳಿಗೆ ರಾಡ್ ಕೂರಿಸಿ ದಾರ ಕಟ್ಟುತ್ತಾರೆಂದರೆ ನಿಜ. ಕಾಲಂಗಳಿಗೆ ಬೂದಿ ಅಥವಾ ಸುಣ್ಣವನ್ನು ಹಾಕುತ್ತಾರೆಂದರೆ ನಿಜ. ಸದರಿ ಜಾಗದಲ್ಲಿ ಎಷ್ಟು ಗೆರೆಗಳನ್ನು ಹಾಕಿರುತ್ತಾರೆಂದು ನನಗೆ ಈಗ ನೆನಪಿಲ್ಲ. ಫೋಟೋಗಳಲ್ಲಿ ಎಷ್ಟು ಗೆರೆಗಳು ನಮೂದಾಗಿರುತ್ತವೆಂದು ನನಗೆ ಹೇಳಲಾಗುವುದಿಲ್ಲ. ನಾವು ಪಂಚಾಯತಿ ಕೆಲಸಕ್ಕೆ ಹೋಗಿದ್ದೆವು ಎಂದು ಕಟ್ಟು ಕಥೆ ಮಾಡಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

14. ಆರೋಪಿಗಳು ನಮಗೆ ಬೈದಿಲ್ಲ ಮತ್ತು ಜಾತಿ ನಿಂದನೆ ಮಾಡಿಲ್ಲ ಹಾಗೂ ಹೊಡಿ-ಬಡಿ ಮಾಡಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ನಿಪಿ-4 ರಿಂದ 9 ರ ಪೋಟೋಗಳನ್ನು ತೋರಿಸುತ್ತಿದ್ದು, ಅವುಗಳಲ್ಲಿ ದಾರ, ಗೆರೆ ಮತ್ತು ಧ್ವಜ ಕಾಣಿಸುವುದಿಲ್ಲ ಎಂದರೆ ನಿಜ. ಸದರಿ ಪೋಟೋಗಳಲ್ಲಿ ಬೂದಿ ಮತ್ತು ಸುಣ್ಣ ಕಾಣುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.